# ಉತ್ತಮ ಅಧ್ಯಾಪಕರು ಮತ್ತು ಕಲಿಕೆಯ ಕುರಿತು


## ಕೃಷ್ಣ ಹರೇಶ್


**ಪ್ರವೇಶಿಕೆ**

ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ ಗೊತ್ತಿಲ್ಲ ಅಂತೂ ಪ್ರಸ್ತುತ ಮಾನವ ಸಮಾಜದಲ್ಲಿ ನಾವು ಶಾಲಾ ವ್ಯವಸ್ಥೆಯನ್ನು ಹೊಂದಿದ್ದೇವೆ. ಮುಖ್ಯಧಾರೆಯ ಶಾಲೆ ಅಥವಾ ಪರ್ಯಾಯ ಶಾಲೆ (ಕೆಲವು ಬಗೆಯ 'ಮನೆ–ಶಾಲೆ' ಮಾದರಿಯನ್ನು ಹೊರತುಪಡಿಸಿರಿ) ಹೀಗೆ ಯಾವುದೇ ಬಗೆಯದ್ದಾಗಿರಲಿ ಮಕ್ಕಳು ಮನೆಯಿಂದ ಹೊರಗೆ ಹೋಗುತ್ತಾರೆ. ಪಾಲಕರಿಂದ ದೂರಕ್ಕೆ ಹೋಗುತ್ತಾರೆ. ಅಧ್ಯಾಪಕರೆಂಬ ಹಿರಿಯರ ಗುಂಪಿನ ಕಡೆಗೆ ಅವರ ಪಯಣ. ಆ ಹಿರಿಯರು ಮಕ್ಕಳನ್ನು ಶಿಕ್ಷಣದ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಶಾಲೆಯಲ್ಲಿನ ಶಿಕ್ಷಣ ಎಂದರೆ ನಿರ್ದಿಷ್ಟ ಬಗೆಯ ಚಟುವಟಿಕೆ ಆಗಿದ್ದು, ಅದಕ್ಕೆ ಹೆಚ್ಚು ಕಡಿಮೆ ಸ್ಪಷ್ಟವಾದ ಗುರಿಗಳಿರುತ್ತವೆ. ಕಲಿಕೆಯ ಈ ಯೋಜನೆಯಲ್ಲಿನ (ಔದ್ಯೋಗಿಕ ಮತ್ತು ಆರ್ಥಿಕ ಎರಡೂ ಅರ್ಥಗಳಲ್ಲಿ) ಬಲುದೊಡ್ಡ ಭಾಗವನ್ನು ಶಾಲೆಗಳು ತಮ್ಮ ವ್ಯವಹಾರವನ್ನಾಗಿಸಿಕೊಂಡಿವೆ. ಶಾಲೆಗಳು ವ್ಯಕ್ತಿಗಳನ್ನು ಭವಿಷ್ಯದ ಉದ್ಯೋಗಕ್ಕೆ ತಯಾರು ಮಾಡುವ ಭರವಸೆಯನ್ನು ಹೊಂದಿವೆ.

ಶಾಲೆಗೆ ಹೋಗುವುದು ಅಲಿಖಿತ ನಿಯಮವೇ ಆಗಿಹೋಗಿದೆಯಷ್ಟೇ ಅಲ್ಲ, ಅದೊಂದು ನಿಮ್ಮನ್ನು ಅಳೆಯುವ ಮಾನದಂಡವೂ ಹೌದು. ನಿಮಗೆ ಶಿಕ್ಷಣವನ್ನು ಪಡೆಯುವ ಆರ್ಥಿಕ ಶಕ್ತಿಯೇ ಇಲ್ಲದಿದ್ದರೆ ಮಾತ್ರ ಈ ಮಾನದಂಡದಿಂದ ಬಿಡುಗಡೆ. ಪಡೆಯುವ ಸಾಮರ್ಥ್ಯ ಇರುವ ಅನೇಕ ಪಾಲಕರಿಗೆ ತಮ್ಮ ಮಕ್ಕಳ ಬೌದ್ಧಿಕ ಬೆಳವಣಿಗೆಗೆ, ಉದ್ಯೋಗ ಗಳಿಸಲು, ಸಾಮಾಜಿಕ ಮೇಲ್ಚಲನೆಗೆ, ಇಂಥದ್ದೇ ಅಥವಾ ಇನ್ನಿತರ ಕಾರಣಗಳಿಗಾಗಿ ಅವರಿಗೆ ಶಿಕ್ಷಣ ಬೇಕಾಗಿದೆ. ಕೆಲವರಿಗೆ ಮಾತ್ರ ಶಿಕ್ಷಣ ಎಂದರೆ ಮನುಷ್ಯನನ್ನು ಪೊರೆಯುವ ಅಧ್ಯಾತ್ಮಿಕ ಪ್ರಸ್ಥಾನ.

ಒಟ್ಟಾರೆ, ಶಾಲೆಗಳನ್ನು ಬದುಕಿನ ತಯಾರಿಯ ಅಗತ್ಯ ಎಂದು ನೋಡಲಾಗುತ್ತದೆ. ಶಾಲಾ ಜೀವನ ಸುಭದ್ರಭವಿಷ್ಯದ ಜೊತೆಗೆ (ಆಕರ್ಷಕ ಉದ್ಯೋಗ ಅಥವಾ ಏರಿಕೆಯಾಗುವ ಸಂಬಳ), ಅಥವಾ ಆತ್ಮ ಸಾಕ್ಷಾತ್ಕಾರದ ಜೊತೆಗೆ ತಳಕು ಹಾಕಿಕೊಂಡಿದೆ. ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಧ್ಯೇಯಗಳು ಕೇವಲ ಪಾಲಕರ ಆಕಾಂಕ್ಷೆಯಷ್ಟೇ ಆಗಿರುವುದಿಲ್ಲ (ತಮ್ಮ ಕೆಲವೂ ಸೇರಿರುತ್ತವೆ), ಅವು ಸಮಾಜದ ಒತ್ತಾಯಗಳಿಂದಲೂ ರೂಪುಪಡೆಯುತ್ತವೆ, ಇವು ನಿರ್ದಿಷ್ಟ ಸಾಮಾಜಿಕ ಹಿನ್ನೆಲೆಗಳಲ್ಲಿನ ಸಿದ್ಧ ನಂಬಿಕೆಗಳಲ್ಲಿ ಕಾಣಬಹುದಾಗಿದೆ. ಶಾಲಾ ವ್ಯವಸ್ಥೆ ಎನ್ನುವುದು ವಿಶಾಲ ಭೂಮಿಕೆಯಲ್ಲಿ ಸ್ವತಂತ್ರವಾಗಿಯೋ ಅಥವಾ ಸಂಭಂಧವಿಲ್ಲದಂತೆಯೋ ಇರುವುದಿಲ್ಲ. ಕೆಲವು ನಿರ್ದಿಷ್ಟ ರೀತಿಗಳಲ್ಲಿ ವಿದ್ಯಾರ್ಥಿಗಳನ್ನು ಸಮರ್ಥರಾಗಿಸುವ ಇಲ್ಲವೇ ಮಾರ್ಗದರ್ಶನ ನೀಡುವ ಭರವಸೆ ನೀಡುತ್ತವೆ. ಸದ್ಯದ ಸಮಾಜದ ಅಥವಾ ನೂತನ ಉತ್ತಮ ಸಮಾಜದ ಅಗತ್ಯಗಳನ್ನು ಚೆನ್ನಾಗಿ ರೀತಿಗಳು ಇವಾಗಿರುತ್ತವೆ.

**ವ್ಯಕ್ತಿಯಾಗಿ ಶಿಕ್ಷಕ**

ಈಗ ಶಿಕ್ಷಕರ ಬಗ್ಗೆ ಮಾತನಾಡೋಣ. ವೃತ್ತಿ ಮತ್ತು ಶೈಕ್ಷಣಿಕ ಶಿಕ್ಷಣದ ಸ್ಥಾಪಿತ ಪರಂಪರೆಯ ನಿರಂತರತೆ ಮತ್ತು ಭವಿಷ್ಯದ ಗೆಲುವಿನೆಡೆಗಿನ ಚಲನೆಯ ಅಗತ್ಯ ಮತ್ತು ವೇಗಕ್ಕಾಗಿ ರೂಪಿತವಾಗಿರುವ ಈ ಶಾಲಾ ವ್ಯವಸ್ಥೆಯ ಒಂದು ಅಂಶವಾಗಿಯಷ್ಟೇ, ಯಂತ್ರದಲ್ಲಿರುವ ಚಕ್ರದ ಹಲ್ಲಿನ ಹಾಗೆ, ಒಬ್ಬ ಶಿಕ್ಷಕ ಉಳಿಯುತ್ತಾನೆ ಎನ್ನುವುದೇ ದುರದೃಷ್ಟ.

ಹಾಗಿದ್ದರೂ, ನನ್ನ ಅಭಿಪ್ರಾಯ ಪ್ರಕಾರ ಶಿಕ್ಷಕರು ಯಾರಿಗೂ, ಎಲ್ಲಿಗೂ ಸೇರಿದವರಲ್ಲ. ಅವರು ಶಾಲೆ ಎಂಬ ನಿರ್ದಿಷ್ಟ ಸಂಸ್ಥೆಯ ಪ್ರತಿನಿಧಿಗಳೂ ಅಲ್ಲ, ತನ್ನ ಬೇಡಿಕೆಗಳನ್ನು ಪೂರೈಸಲು ಯುವ ಮನಸ್ಸುಗಳನ್ನು ರೂಪಿಸುವುದಕ್ಕಾಗಿ ನಿಯೋಜನೆಗೊಂಡ ಸಮಾಜದ ಏಜೆಂಟ್‌ಗಳೂ ಅಲ್ಲ. ಅವರು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಸ್ವತಂತ್ರ ಜಿಜ್ಞಾಸುಗಳು. ಅವರು ಯಾವುದೇ ನಿರ್ದಿಷ್ಟ ವಿಚಾರಧಾರೆಯ ಪ್ರಚಾರಕರಲ್ಲ. ಅವರು ಎಲ್ಲ ವಿಚಾರಧಾರೆಗಳ ಚಿಂತನಶೀಲ ವಿಮರ್ಶಕರೂ ಆಗಿರುತ್ತಾರೆ. ಅವರು ಹಿರಿಯರ ಜಗತ್ತಿನ ಆದರ್ಶಗಳಲ್ಲ. ಅನೇಕ ವಯಸ್ಕರು ತಮಗೆ ತೋಚಿದಂತೆ, ಅನೇಕ ಸಂದರ್ಭಗಳಲ್ಲಿ ಒತ್ತಾಯಪೂರ್ವಕವಾಗಿ ನಿರ್ಮಿಸಿದ ಸಮಾಜವನ್ನು ಅವಲೋಕಿಸುವ ಮತ್ತು ಅದರ ಬಗ್ಗೆ ಅಭಿಪ್ರಾಯ ಹೇಳುವ ಅದೇ ಜಗತ್ತಿನಿಂದ ಹೊರಬಂದ ವಯಸ್ಕರು ಅವರು.

ಒಬ್ಬ ಶಿಕ್ಷಕರಿಗೆ ವಿದ್ಯಾರ್ಥಿಗಳ ಮೇಲೆ, ಅವರ ಕಲಿಕೆಯ ಮೇಲೆ ನೇರವಾಗಿ ಮತ್ತು ಬಲವಂತವಾಗಿ ಪರಿಣಾಮ ಬೀರಬಲ್ಲ ಸಾಮರ್ಥ್ಯ ಇರುವಂತೆ ಕಾಣಿಸುತ್ತದೆ. ಅನೇಕ ಬಾರಿ ನಮ್ಮ ಬದುಕಿನಲ್ಲಿ ಬಂದು ಹೋದ ಉತ್ತಮ ಶಿಕ್ಷಕರು ನೀಡಿದ ಆಳದ ಕಲಿಕೆಗಳು ದೀರ್ಘ ಕಾಲದ ಚಿಂತನೆಗೆ ಉಳಿಸಿ ಬಿಡುತ್ತಾರೆ. ನನ್ನ ಬದುಕಿನಲ್ಲಿ ದೊರಕಿದ ಉತ್ತಮ ಶಿಕ್ಷಕರ ವೈಶಿಷ್ಟ್ಯಗಳನ್ನು ನೆನಪಿಸಿಕೊಂಡರೆ, ಅವರು ಹಾಗೆ ಆಗಿದ್ದು ಹೇಗೆ ಎಂದು ಅರಿವಾಗುತ್ತದೆ. ತಮ್ಮ ವಿದ್ಯಾರ್ಥಿಗಳ ಸ್ಪಂದನೆ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಅವರು ನಿರಂತರ ಪ್ರೀತಿಯ ಚಿಲುಮೆಯಾಗಿ, ಆದರೆ ಅಗತ್ಯವಿದ್ದಾಗ ಗದರಿಸುವವರಾಗಿ ಮುಕ್ತಮನಸ್ಸಿನ ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಅವರು ಜ್ಞಾನಿಗಳಾಗಿದ್ದರೂ, ಕಲಿಯುವ ಇಚ್ಛೆ ಇರುವವರು. ತಮ್ಮ ತರಗತಿಗೆ ಸಾಕಷ್ಟು ಪೂರ್ವಸಿದ್ಧತೆ ಮಾಡಿಕೊಂಡು ಹೋಗುತ್ತಾರೆ. ಆದರೂ ಹೊಂದಿಕೊಳ್ಳುವ ಸ್ವಭಾವದವರೂ ಸುಲಲಿತವಾಗಿ ಪಾಠಮಾಡಬಲ್ಲವರೂ ಆಗಿರುತ್ತಾರೆ. ಸಂವಾದಗಳಲ್ಲಿ ಅವರು ಹೆಚ್ಚಿನ ಉತ್ಸಾಹ ತೋರುತ್ತಾರೆ. ಕಲಿಕಾ ಸಾಮಗ್ರಿಗಳನ್ನು ಹೊಂದಿಸುಕೊಳ್ಳುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸುತ್ತಾರೆ. ಮಾತುಕತೆಯಲ್ಲಿ ಅವರು ಅನೌಪಚಾರಿಕರಾಗಿ ಇರುತ್ತಾರೆ. ಶ್ರದ್ಧೆಯಿಂದ ಇರುವವರೂ, ಯಾವತ್ತೂ ಸಿಗಬಲ್ಲವರೂ ಮತ್ತು ಪ್ರತಿಕ್ರಿಯೆ ನೀಡಬಲ್ಲವರೂ ಆಗಿರುತ್ತಾರೆ. ದೃಢಮನಸ್ಸಿನವರೂ ದಯೆಯುಳ್ಳವರೂ ಆಗಿರುತ್ತಾರೆ. ವಿದ್ಯಾರ್ಥಿಗಳು ಮತ್ತು ತರಗತಿ ಕೋಣೆಗಳಿಗೂ ಹೊರತಾಗಿ ಹೆಚ್ಚಿನ ಸಮಯ, ಆಳದ ಜಬಾಬ್ದಾರಿಯ ಪ್ರಜ್ಞೆಯನ್ನು ತೋರುತ್ತಾರೆ. ನಮ್ಮ ಹಾಗೇ ತಪ್ಪು ಮಾಡಬಲ್ಲ ಮನುಷ್ಯರಾಗಿ ನಮ್ಮ ಮನಸ್ಸಿನಲ್ಲಿ ಎತ್ತರದ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. ಇಂತಹ ಅಧ್ಯಾಪಕರಿಗೆ ತಮ್ಮ ಇಷ್ಟು ಒಳ್ಳೆಯ ಗುಣಗಳ ಬಗೆಗೆ ಪ್ರಜ್ಞೆ ಇರುವುದಿಲ್ಲ. ಇದು ಅವರನ್ನು ಹೆಚ್ಚು ವಿನಮ್ರರನ್ನಾಗಿಸುತ್ತದೆ. ಮತ್ತು ಎಲ್ಲರೂ ಮೆಚ್ಚುವಂತೆ ಮಾಡುತ್ತದೆ.

**ವೃತ್ತಿಯಾಗಿ ಶಿಕ್ಷಣ**

ದಿ ಇಕನಾಮಿಸ್ಟ್ ಪತ್ರಿಕೆಯಲ್ಲಿ ಬಂದ ಬೋಧನೆ ಮತ್ತು ಶಿಕ್ಷಕ ತರಬೇತಿಯ ಕುರಿತ ಲೇಖನವೊಂದನ್ನು ಸಹೋದ್ಯೋಗಿಯೊಬ್ಬ ಹಂಚಿಕೊಂಡಿದ್ದ. ಹೆತ್ತವರಿಗೆ ಅತ್ಯಂತ ಕಾಳಜಿಯ ವಿಚಾರವಾಗಿರುವ ತರಗತಿಯ ಗಾತ್ರ, ಸಾಮರ್ಥ್ಯಕ್ಕನುಗುಣವಾಗಿ ಕಲಿಸುವುದು ಇತ್ಯಾದಿಗಳೆಲ್ಲ ವಿದ್ಯಾರ್ಥಿಗಳ ಯಶಸ್ವೀ ಕಲಿಕೆಯ ಅನುಭವದಲ್ಲಿ ಯಾವುದೇ ಪಾತ್ರವಹಿಸುವುದಿಲ್ಲ ಎನ್ನುವುದು ಲೇಖನದ ಒಟ್ಟಂದದ ತಾತ್ಪರ್ಯ. ಅಧ್ಯಾಪಕರ ಪರಿಣತಿಯೇ ವಿದ್ಯಾರ್ಥಿಗಳ ಯಶಸ್ಸನ್ನು ಹೆಚ್ಚು ಪ್ರಭಾವಿಸುವ ಅಂಶ. ಎಲ್ಲ ವಿದ್ಯಾರ್ಥಿಗಳನ್ನು ಒಳಗೊಂಡು ಒಬ್ಬ ಅಧ್ಯಾಪಕ ನಿಜವಾಗಿಯೂ ತರಗತಿಯಲ್ಲಿ ಏನು ಮಾಡುತ್ತಾನೆ ಎನ್ನುವುದೇ ಪ್ರಮುಖ ವಿಷಯ*. ಈ ಫಲಿತಾಂಶ ಆಶ್ಚರ್ಯಕರ ಅಲ್ಲ, ಆದರೆ ಇದು ಅತ್ಯಂತ ಉಪಯುಕ್ತ. ವಿಶಾಲ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕ ಪ್ರಭಾವಿಸಬಲ್ಲ, ಪರಿವರ್ತಿಸಬಲ್ಲ ಮೂಲ ವ್ಯಕ್ತಿಯಾಗಿಯೇ ಕಾಣಿಸುತ್ತಾನೆ ಎನ್ನುವುದನ್ನು ಬಹು ಸಂಖ್ಯೆಯ ಅಧ್ಯಯನಗಳನ್ನು ಗಮನಿಸಿ ಸಾಬೀತುಮಾಡಲಾಗಿದೆ.

ಮುಂದುವರೆಯುತ್ತಾ, ಉತ್ತಮವಾಗಿ ಕಲಿಸುವುದು ವ್ಯಕ್ತಿಯಲ್ಲಿ ಜನ್ಮಜಾತ ಕಲಾತ್ಮಕ ಪ್ರತಿಭೆ ಎಂದೇ ಸಾಮಾನ್ಯವಾಗಿ ನಂಬಲಾಗಿದೆ ಎಂಬುದನ್ನೂ ಲೇಖನ ಉಲ್ಲೇಖಿಸುತ್ತದೆ. ಇದು ಕೆಲವು ಅಪರೂಪದ ಪ್ರಕರಣಗಳಲ್ಲಿ ಹೌದಾದರೂ ತರಗತಿಯಲ್ಲಿ ಕಲಿಸುವಿಕೆಯು ಜನ ಕಲಿಯಬಹುದಾದ ಅತ್ಯಂತ ಸುಧಾರಿತ ಮತ್ತು ಕೌಶಲ್ಯಪೂರ್ಣ ಕಸುಬು ಎನ್ನುವುದು ಸ್ಪಷ್ಟ. ಕೌಶಲ್ಯಗಳನ್ನು ಕಲಿಯಬಹುದು, ಸುಧಾರಿಸಬಹುದು, ತಂತ್ರಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳಬಹುದು ಮತ್ತು ಸಮರ್ಥವಾಗಿ ಮಾಡಬಹುದು.

ವರ್ತನಾ ವಿಜ್ಞಾನದಲ್ಲಿ ಗ್ರಹಿಸಿದಂತೆ ಮತ್ತು ವಿವರಿಸಿದಂತೆ ಈ ಬಗೆಯ ಬೋಧನೆಯ ಅಭ್ಯಾಸವನ್ನು ಕಲಿಯುವುದು ಸಾಧ್ಯ ಉದಾಹರಣೆಗೆ ಶೈಕ್ಷಣಿಕ ಮನೋವಿಜ್ಞಾನದ ಕ್ಷೇತ್ರ. ಈ ವಿಷಯದ ಕುರಿತ ಶಾಸ್ತ್ರೀಯ

ಮತ್ತು ಸಮಕಾಲೀನ ಸಂಶೋಧನೆಗಳಲ್ಲಿ ನಮಗೆ ತರಗತಿಯ ಕೋಣೆಯ ಶಿಕ್ಷಣದ ಕುರಿತು ಒಂದು ಜೀವಮಾನಕ್ಕೆ ಸಾಕಾಗುವಷ್ಟು ಹೊಸ ಚಿಂತನೆಗಳ ಸಾಕಷ್ಟು ಮಾಹಿತಿ ಸಿಗುತ್ತವೆ. ಈ ಸಂಶೋಧನೆಯ ತುಂಬ ಉಪಯುಕ್ತ ಸಿದ್ಧಾಂತಗಳು ಮತ್ತು ಮಾದರಿಗಳಿವೆ: ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಬಗ್ಗೆ, ಅವರ ಬೋಧನೆಯ ಶೈಲಿಯ ಬಗ್ಗೆ, ಅವರ ಕಲಿಕೆಯ ಶೈಲಿಯ ಬಗ್ಗೆ ಮತ್ತು ವ್ಯಕ್ತಿತ್ವದ ಶೈಲಿಯ ಬಗ್ಗೆ ಮಾಹಿತಿಗಳು ಇಲ್ಲಿವೆ; ಅರಿವು ಮತ್ತು ನೈತಿಕ ವಿಕಾಸದಲ್ಲಿ ಮಕ್ಕಳ ವಿವಿಧ ಹಂತಗಳ ಬಗ್ಗೆ; ಶೈಕ್ಷಣಿಕ ಸಂಸ್ಥೆಗಳು ತಮ್ಮಲ್ಲಿರುವ ಸ್ಥಳಾವಕಾಶವನ್ನು ಪರಿಣಾಮಕಾರಿಯಾಗಿ ಬಳಸುವ ಯೋಜನೆಗಳ ಬಗ್ಗೆ; ವಿಶೇಷ ಕಲಿಕೆಯ ಅಗತ್ಯಗಳಿಗಾಗಿ ಇರುವ ಒಳಗೊಳ್ಳುವ ಶಿಕ್ಷಣದ ಬಗೆಗೆ ಇತ್ಯಾದಿ.

ಈ ಕ್ಷೇತ್ರ ನೀಡುವ ಒಳನೋಟಗಳನ್ನು ಯಾರೊಬ್ಬರೂ ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಪರಿಣಾಮಕಾರಿ ಬೋಧನಾ ಅಭ್ಯಾಸಗಳ ಕುರಿತ ಕಲಿಕೆಯು ವ್ಯಕ್ತಿಯ ಕಲಿಕಾ ಅನುಭವವನ್ನು ಮೇಲುಸ್ತರಕ್ಕೆ ಕೊಂಡೊಯ್ಯಬಲ್ಲುದು.

**ಉತ್ತಮ ಬೋಧನೆ ಮತ್ತು ಉತ್ತಮ ಅಧ್ಯಾಪಕ**

ಪರಿಣಾಮಕಾರಿ ಬೋಧನಾ ತಂತ್ರಗಳನ್ನು ನಿಯಮಿತವಾಗಿ ಆಗಾಗ್ಗೆ ಕಲಿಯುತ್ತಿರುವುದು ಅತ್ಯಗತ್ಯ. ನನ್ನ ಪ್ರಕಾರ ಇದರೊಟ್ಟಿಗೆ ಬೋಧನೆಯ ಸಂಸ್ಕೃತಿಯನ್ನೇ ಗ್ರಹಿಸುವ ಆಸಕ್ತಿಯನ್ನು ಹೊಂದಿರಬೇಕಾದದ್ದು ಮುಖ್ಯ ಮತ್ತು ಅದನ್ನು ಕಲಿತರೆಂದರೆ ಅಂತಹ ಸಂಸ್ಕೃತಿಯೊಂದನ್ನೇ ಕಟ್ಟಿದಂತೆ. ಇದನ್ನು ಮಾಡಲು ಶಕ್ತವಾದ ಮತ್ತು ತರಗತಿ ಹಾಗೂ ಶಾಲೆಗಳ ಗುಣವಿಶೇಷಗಳನ್ನೇ ಪರಿವರ್ತಿಸಬಲ್ಲ ಕೆಲವ ಪ್ರಶ್ನೆಗಳ ಬಗ್ಗೆ ಸ್ಥೂಲವಾಗಿ ವಿಶ್ಲೇಷಿಸಲು ಇಚ್ಛಿಸುತ್ತೇನೆ. ಈ ಪ್ರಶ್ನೆಗಳು ನನ್ನ ಬೋಧನೆಯ ಪಯಣದಲ್ಲಿ ನನ್ನಲ್ಲಿ ಸ್ಫೂರ್ತಿ ತುಂಬಿವೆ (ಮತ್ತು ಕಾಡಿವೆ). ದೈನಂದಿನ ಚಟುವಟಿಕೆಯಲ್ಲಿ ಯಾವುದೋ ಒಂದು ಕ್ರಿಯೆಗೆ ಸ್ಪಷ್ಟ ನಿರ್ದೇಶನ ನೀಡುವುದಕ್ಕಿಂತ ಹೆಚ್ಚಾಗಿ ಇವು ವೈವಿಧ್ಯ ಕ್ರಿಯೆಗಳು ಮೊಳಕೆಯೊಡೆಯಬಲ್ಲ ಪ್ರಶ್ನೆಗಳನ್ನು ಹೊಮ್ಮಿಸಬಲ್ಲುದೆಂಬ ಆಶಯ ನನ್ನದು.

ಒಂದು ಮೊದಲ ಮಾತು: ಒಬ್ಬ ಉತ್ತಮ ಶಿಕ್ಷಕರನ್ನು ಗುರುತಿಸುವುದು ಮುಖ್ಯವೆನಿಸಿದರೂ, ಉತ್ತಮವಾಗಿ ಕಲಿಸುವುದು ಎಂದರೇನು ಎಂಬುದನ್ನು ಅನ್ವೇಷಿಸುವುದು ಉತ್ತಮ ಶಿಕ್ಷಕ ಎಂದು ವ್ಯಕ್ತಿಗಳನು ಹುಡುಕುವುದಕ್ಕಿಂತ ಪ್ರಮುಖವೆನ್ನುವುದು ನನ್ನ ಅನಿಸಿಕೆ. ಇಡೀ ಶಿಕ್ಷಣದ ಪ್ರಕ್ರಿಯೆಯ ಕೇಂದ್ರದಲ್ಲಿರುವುದು ಕಲಿಯುವುದು ಮತ್ತು ಕಲಿಸುವುದು ಹಾಗೂ ಇವೇ ಮುಖ್ಯ. ಯಾವುದೇ ಶಿಕ್ಷಕರನ್ನು ಒಳ್ಳೆಯ ಅಥವಾ ಅಲ್ಲ ಎಂದು ಮೌಲ್ಯಾಂಕನ ಮಾಡುವಾಗ ವ್ಯಕ್ತಿಯ ಮತ್ತು ಅವರ ಸಾಮರ್ಥ್ಯಗಳ ಬಗ್ಗೆ ಹೆಚ್ಚು ಗಮನವಿರುತ್ತದೆ. ಒಬ್ಬ ವ್ಯಕ್ತಿಯನ್ನು ಮಾದರಿ ಎಂದು ಮೌಲ್ಯಮಾಪನ ಮಾಡಿದಾಗ ಅಲ್ಲಿ ನಿರ್ದಿಷ್ಟ ನಂಬಿಕೆಗಳಿರುತ್ತವೆ. ಬಹಳ ಸ್ಪಷ್ಟವಾಗಿ, ಹೆಚ್ಚು ಕಡಿಮೆ ಯಾವುದೇ ಬದಲಾವಣೆಗೆ ಒಳಗಾಗದ ಸಾಮರ್ಥ್ಯಗಳ ನಿಶ್ಚಲ ಗುರುತಿಸುವಿಕೆ ಅಥವಾ ವ್ಯಕ್ತಿತ್ವದ ನಂಬಿಕೆಗಳಿರುತ್ತವೆ. ಇದರ ಬಗೆಗೆ ನಾವು ಸಿನಿಕರಾಗಿರಬೇಕಾಗಿದೆ.

ಇವು ಕೇವಲ ನನ್ನ ಚಿಂತನೆಗಳಲ್ಲ. ಅನೇಕ ಮಂದಿ ಚಿಂತಕರಿಂದ ಪ್ರೇರಿತ ಚಿಂತನೆಗಳಾಗಿವೆ. ಕಳೆದ ಶತಮಾನದ ಒಬ್ಬ ವಾಗ್ಮಿ ಮತ್ತು ಚಿಂತಕರ ಪ್ರಶ್ನೆಯೊಂದನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ. ಅವರ ಹೆಸರು ಜೆ. ಕೃಷ್ಣಮೂರ್ತಿ. ಅವರು ಜೀವನ ಮತ್ತು ಶಿಕ್ಷಣದ ಕುರಿತ ಸಂವಾದಗಳಿಗೆ ಹೆಸರುವಾಸಿ. ಕಲಿಸುವುದು ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಅರಿಯುವ ಈ ಪ್ರಶ್ನೆಗಳನ್ನು ಜೀವಂತವಾಗಿಡುತ್ತಾ ಯಾವುದು ಒಬ್ಬ ಉತ್ತಮ ಶಿಕ್ಷಕನನ್ನು ರೂಪಿಸುತ್ತದೆ ಎನ್ನುವುದನ್ನೂ ಈ ಮೂಲಕ ನೋಡಬಹುದಾಗಿದೆ.

**ಉತ್ತಮ ಸಂಬಂಧಗಳನ್ನು ಹೊಂದುವುದು ಎಂದರೇನು?**

ಸಂಬಂಧ ಎನ್ನುವುದು ಕಲಿಕೆಯ ಕೇಂದ್ರದಲ್ಲಿ, ಕನಿಷ್ಠ ಶಾಲೆಯಲ್ಲಾದರೂ, ಇರುವಂತೆ ತೋರುತ್ತದೆ. ಪ್ರಾಮಾಣಿಕವಾದ ವಿಶಾಲ ಮನಸ್ಸಿನ ಸಂಬಂಧ ಕೇವಲ ಮಕ್ಕಳು ಮತ್ತು ಶಿಕ್ಷಕರ ನಡುವೆ ಮಾತ್ರ ಅಲ್ಲ, ಸಹೋದ್ಯೋಗಿಗಳ ನಡುವೆ, ಶಿಕ್ಷಕರು ಮತ್ತು ಪಾಲಕರ ನಡುವೆ ಕೂಡ ಇರಬೇಕಾಗುತ್ತದೆ. ಇದರ ಅರ್ಥ ಇನ್ನೊಬ್ಬರ ಜತೆಗೆ ತನ್ನ ಪ್ರಾಮುಖ್ಯತೆಯ ಮನ್ನಣೆಗೆ ವಯಸ್ಕರಂತೆ ಸ್ಪರ್ಧಿಸುವುದಲ್ಲ ಅಥವಾ ಶಿಕ್ಷಣ ಪ್ರಕ್ರಿಯೆಯಲ್ಲಿ ತನ್ನ ಸಾಮರ್ಥ್ಯ ಮತ್ತು ಮಹತ್ವವನ್ನು ಇನ್ನೊಬ್ಬರ ಜತೆಗೆ ತುಲನೆ ಮಾಡುವುದೂ ಅಲ್ಲ.

ಇದೇ ತೆರನಾಗಿ, ವಿದ್ಯಾರ್ಥಿಗಳು ಅವರೇನೋ ಹಾಗೆಯೇ ಕಾಣಲು ಸಾಧ್ಯವೆ? ವ್ಯಕ್ತಿಯ ಕಲಿಕೆಯ ಅನುಭವವನ್ನು ಅದೇನೋ ಹಾಗೆಯೇ ಯಾವುದೇ ತುಲನೆಯಿಲ್ಲದೇ ನೋಡುವುದು ಸಾಧ್ಯವೆ? ಒಬ್ಬ ಶಿಕ್ಷಕನಿಗೆ

ವಿದ್ಯಾರ್ಥಿಯ ಒಪ್ಪಿಗೆ ಮತ್ತು ಮೆಚ್ಚುಗೆ ಪಡೆಯುವುದು ತನ್ನದೇ ಅಗತ್ಯ ಎಂಬ ಎಚ್ಚರಿಕೆ ಮೂಡುವುದು ಸಾಧ್ಯವೆ? ಸ್ವಹಿತ ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆಗಳು ಮೇಲೇಳುತ್ತಿರುವಂತೆಯೇ ಗಮನಿಸಿಕೊಳ್ಳಲು ಸಾಧ್ಯವಾಗಿಸಿಕೊಳ್ಳುತ್ತಾ ಇಡಿಯಾದ ಆಳವಾದ ಹೊಣೆಗಾರಿಕೆಯ ಸಂಬಂಧಗಳಿಗೆ ಜಾಗ ಕಂಡುಕೊಳ್ಳುವುದು ಸಾಧ್ಯವೆ?

**ತರಗತಿಯಲ್ಲಿನ ಶಿಸ್ತಿನ ಬಗ್ಗೆ**

ತರಗತಿಯಲ್ಲಿ ಮಕ್ಕಳ ಮೇಲೆ ಪೂರ್ಣ ನಿಯಂತ್ರಣ ಹೊಂದಿರುವು ಉತ್ತಮ ಶಿಕ್ಷಕರ ದ್ಯೋತಕವಾಗಿದೆ! ವಿಧೇಯತೆಯನ್ನು ಹೊಮ್ಮಿಸುವುದು ಮತ್ತು ಶಿಸ್ತು ಸ್ಥಾಪಿಸುವುದು ವ್ಯಕ್ತಿಗೆ ಪರಿಪೂರ್ಣತೆಯ ಒಂದು ಆಳದ ಭಾವನೆಯನ್ನು ಕೊಡುತ್ತದೆ ಎಂದೆನಿಸುತ್ತದೆ. ಗೊಂದಲದ, ಅಸ್ತವ್ಯಸ್ತವಾದ ತರಗತಿಯು ಇದಕ್ಕಿಂತ ಒಳ್ಳೆಯದು ಎಂದೇನೂ ಇಲ್ಲಿ ನಾನು ಪ್ರಸ್ತಾಪಿಸುತ್ತಾ ಇಲ್ಲ. ಆದರೂ, ವಿದ್ಯಾರ್ಥಿಗಳ ಮತ್ತು ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸುವುದಕ್ಕಾಗಿ ಇನ್ನಿಲ್ಲದ ಹೋರಾಟ ನಡೆಸುವುದರಿಂದ ದೂರ ಉಳಿಯುವುದು ಒಳಿತು. ಸ್ವಂತ ಜ್ಞಾನದ ಅಥವಾ ಅನುಭವದ ಅಧಿಕಾರವನ್ನು ಹೇರದೆ ಕಲಿಕೆಯ ಪ್ರಕ್ರಿಯೆ ತೆರೆದುಕೊಳ್ಳಲು ದಾರಿ ಕಂಡುಕೊಳ್ಳಬೇಕಾಗಿದೆ. ವಾತ್ಸಲ್ಯಮಯ ಸಂಬಂಧದ ಬೆಳಕಿನಲ್ಲಿ ಸಲ್ಲಬೇಕಾದ ಗೌರವವನ್ನು ಇವೆರಡೂ ಪಡೆದುಕೊಳ್ಳಲಿವೆ. ವಿಷಯ ಜ್ಞಾನದಲ್ಲಿ ಖಚಿತತೆ ಇಲ್ಲದಿರುವುದು ಅಥವಾ ತರಗತಿಯಲ್ಲಿ ವಿದ್ಯಾರ್ಥಿಗಳೊಡನೆ ವ್ಯವಹರಿಸುವಲ್ಲಿ ಅಥವಾ ವಿಷಯದ ನಿರ್ವಹಣೆಯಲ್ಲಿ ಅಸಮರ್ಥರಾಗಿರುವುದು ಗೊಂದಲವನ್ನುಂಟು ಮಾಡುವುದು ಸತ್ಯವಾದರೂ, ಇವೆಲ್ಲವೂ ಇರುವುದು ಸಮರ್ಥ ಕಲಿಕೆಯ ಖಾತರಿಯನ್ನು ನೀಡಲಾರರು! ತರಗತಿಯ ಶಿಸ್ತು ಎಂದರೆ ವಿದ್ಯಾರ್ಥಿಗಳ ವರ್ತನೆಯನ್ನು ಒಂದೇ ತೆರನಾಗಿಸುವುದಲ್ಲ, ಬದಲಿಗೆ ವಿದ್ಯಾರ್ಥಿಗಳ ಕಲಿಕೆಯ ಕುತೂಹಲವನ್ನು ಪ್ರೋತ್ಸಾಹಿಸುವುದು. ಶಿಕ್ಷಕ – ವಿದ್ಯಾರ್ಥಿಯ ಸಂಬಂಧ ದಬ್ಬಾಳಿಕೆಯ ಸಂಬಂಧವಾಗಿದ್ದರೆ ಇದು ಹೊಮ್ಮುವುದಿಲ್ಲ.

**ಕಲಿಕೆಯಲ್ಲಿ ಭಯ ಮತ್ತು ಪ್ರತಿರೋಧದ ಪಾತ್ರವೇನು?**

ಶಾಲೆಗಳೆಂದರೆ ಈಗ ಸಾಧನೆಗೆ ಹೆಚ್ಚಿನ ಆದ್ಯತೆ. ಒಳ್ಳೆಯ ಶಾಲೆಯನ್ನು ಹುಡುಕುವುದೆಂದರೆ ಹೆತ್ತವರಿಗೆ ತಮ್ಮ ಉತ್ತಮ ಪಾಲಕತ್ವದ ಪುರಾವೆ ಆಗಿಬಿಟ್ಟಿದೆ! ಕಲಿಕೆ ಎಂದರೆ ಇಷ್ಟಕ್ಕೆ ಸೀಮಿತವಲ್ಲ. ಮೌಲ್ಯಾಂಕನ ಮತ್ತು ಪರೀಕ್ಷೆಗಳು ವಿದ್ಯಾರ್ಥಿಗಳಲ್ಲಿ ಕೌಶಲಗಳ ಬೆಳವಣಿಗೆಗಳನ್ನು ಅರಿಯಲು ಇರುವ ಸಾಧನಗಳಷ್ಟೇ. ನಿರಂತರವಾಗಿ ಈ ಸಾಧನಗಳನ್ನು ಬಳಸಿ ಒಬ್ಬ ವಿದ್ಯಾರ್ಥಿಯ ಕಲಿಕೆಯನ್ನು ಮೌಲ್ಯಮಾಪನ ಮಾಡುವುದು, ಕಲಿಕೆಯನ್ನು ಶುದ್ಧವಾಗಿ ಸಂಚಿತ ಮತ್ತು ಸಾಧನೆಯಾಗಿ ನೋಡುವುದು ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಕೇವಲ ಅಧೈರ್ಯ ಮತ್ತು ಆತಂಕಕ್ಕಷ್ಟೇ ಕಾರಣವಾಗಬಲ್ಲುದು. ಈ ಸಾಧನಗಳೇ ಒಟ್ಟು ಕಲಿಕೆಯ ಪ್ರಕ್ರಿಯೆಯನ್ನು ಆಕ್ರಮಿಸುವುದು ಸಾಧ್ಯವಿಲ್ಲ. ತರಗತಿಗಳು ಮತ್ತು ಶಾಲೆಗಯಲ್ಲಿನ ಸಂಬಂಧಗಳು ಪದೇ ಪದೇ ಮಕ್ಕಳಲ್ಲಿ ವಿಷಯದ ಬಗ್ಗೆ ಮತ್ತು ಸಾಧನೆಯ ಬಗ್ಗೆ ಭಯವನ್ನು ತುಂಬುತ್ತವೆ. ಈ ಸಾಧನೆಯ ಭೂತ ಅಡಚಣೆಯಾಗಿ ಹೇಗೆ ಮಾರ್ಪಾಡಾಗಿದೆ ಎಂಬುದರ ಕಲ್ಪನೆಯಾದರೂ ನಮಗೆ ಸಾಧ್ಯವೇ? ಕೇವಲ ವಿಷಯದಲ್ಲಿನ ಸಾಧನೆಯ ಅಥವಾ ಸಂಬಂಧದ ಭಯವನ್ನು ಅರಿಯುವುದಷ್ಟೇ ಅಲ್ಲ, ಭಯದ ಬಗ್ಗೆಯೇ ಅರಿಯಲು ಗಮನಿಸುವುದು ಸಾಧ್ಯವೆ? ನಾವು ಒಪ್ಪಿಕೊಳ್ಳಲು ಸಿದ್ಧವಿರುವುದಕ್ಕೂ ಹೆಚ್ಚಾಗಿ ಕಲಿಕೆ ಎನ್ನುವುದು ಒಂದು ಭಾವನಾತ್ಮಕ ಅನುಭವ. ಇದನ್ನು ಅರ್ಥಮಾಡಿಕೊಂಡರೆ ಕೆಲಸ ಮಾಡುವಲ್ಲಿಯೂ ಇರುವ ಪ್ರತಿರೋಧದ ಸಮಸ್ಯೆಯನ್ನು ಬಗೆಹರಿಸಲು ಸುಳಿವು ಇಲ್ಲೇ ಸಿಕ್ಕಿಬಿಡುತ್ತದೆ. ಹಾಗಾದಾಗ ಯಾವುದೇ ಬಾಹ್ಯ ಪ್ರೇರೇಪಣೆಯ ಅಗತ್ಯ ಬರುವುದಿಲ್ಲ.

**ನಾವು ಪ್ರೇರೇಪಣೆಯನ್ನು ಅರ್ಥಮಾಡಿಕೊಳ್ಳುವುದು ಹೇಗೆ?**

ಹಿರಿಯರಾದ ನಾವು ನಮ್ಮ ಜೀವನದಲ್ಲಿ ವಿವಿಧ ರೂಪಗಳ ಹಿಂಸೆಯನ್ನು ಪ್ರತಿಪಾದಿಸುವಂತೆ ಕಾಣುತ್ತದೆ. ಕಲಿಕೆಯ ವಿಷಯವನ್ನು ಎದುರಿಸುವ ಸಂದರ್ಭದಲ್ಲಿ ಪುರಸ್ಕರಿಸುವ ಇಲ್ಲವೆ ಶಿಕ್ಷಿಸುವ ಧೋರಣೆ ಅಂಥವುಗಳಲ್ಲಿ ಒಂದು. ಇಂಥ ಪ್ರೇರಣೆಯ ವ್ಯವಸ್ಥೆಯಲ್ಲಿನ ಹಿಂಸೆಯನ್ನು ನಾವು ನೇರವಾಗಿ ಗಮನಿಸಬಹುದು. ಯಾಕೆ ಶಿಕ್ಷೆ ಎನ್ನುವುದು ಹಿಂಸಾತ್ಮಕ ಎನ್ನುವುದು ತಕ್ಷಣ ಸ್ಪಷ್ಟವಾಗುತ್ತದೆ. ಆದರೆ ಯಾಕೆ ಪುರಸ್ಕಾರಗಳು ಕೂಡ ಹಿಂಸೆ ಎನ್ನುವುದು ಸ್ಪಷ್ಟವಾಗುವುದಿಲ್ಲ. ನಿರೀಕ್ಷಿತ ವರ್ತನೆಗಳನ್ನು ಹೆಕ್ಕಿ ತೆಗೆಯುವುದು ಮತ್ತು ಅವರಿಗೆ ಪುರಸ್ಕಾರ ನೀಡುವುದು, ಪುರಸ್ಕಾರಗಳೊಂದಿಗೆ ಸಾಮಾಜಿಕ ಹೊಂದಾಣಿಕೆ ವರ್ತನೆಯನ್ನು ಜೋಡಿಸುವುದು–

ಇವುಗಳಿಂದೆಲ್ಲ ಮಕ್ಕಳನ್ನು ಪಾವ್ಲೋವ್‌ನ ನಾಯಿಗಳ ಮಟ್ಟಕ್ಕೆ ಇಳಿಸಿದಂತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ! ವಾತ್ಸಲ್ಯಪೂರಿತ ಮತ್ತು ಪ್ರಾಮಾಣಿಕ ಪ್ರೋತ್ಸಾಹ, ಪರಿಣಾಮಕಾರಿ ಮೆಚ್ಚುಗೆ, ವಿವೇಚನಾಯುಕ್ತ ಗದರಿಕೆ ಇವೆಲ್ಲ ನಾನು ಇಲ್ಲಿ ಉಲ್ಲೇಖಿಸುವ ವಿಚಾರಗಳಲ್ಲ.

ಪುರಸ್ಕಾರ ಮತ್ತು ಶಿಕ್ಷೆಯ ಅತ್ಯಂತ ಸರಳ ವ್ಯವಸ್ಥೆ ಸಾಂಪ್ರದಾಯಿಕತೆಯನ್ನು, ಅಧಿಕಾರಕ್ಕೆ ವಿಧೇಯತೆಯನ್ನು ಉತ್ತೇಜಿಸುತ್ತದೆ ಮತ್ತು ಸೃಜನಶೀಲತೆಯನ್ನು ಅದುಮಿಬಿಡುತ್ತದೆ. ನಿಜ, ನಾವು ಲೆಕ್ಕ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ಕಲಿಯಬಹುದು. ಇದರೊಟ್ಟಿಗೇ ಲೆಕ್ಕ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ಕಲಿಯಲು ಯಪಯೋಗಿಸುವ ಕೈಚಳಕಗಳಲ್ಲಿ ಇರುವ ಹಿಂಸೆಯನ್ನೂ ಕಲಿಯಬಹುದು.

ಕಲಿಕೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರಿಗೆ ಮೇಲಿನ ನಾಲ್ಕು ಪ್ರಶ್ನೆಗಳು ನೇರವಾಗಿ ಪ್ರಸ್ತುತ ಎಂದು ಕಾಣಿಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿರುವ ಯಾವುದೇ ಶಿಕ್ಷಕ ಬಹಳ ದಿನಗಳ ಕಾಲ ನಿರ್ಲಕ್ಷಿಸಲಾಗದಂತಹ ಕೆಲವು ಹೆಚ್ಚು ಸಂಕೀರ್ಣ ಪ್ರಶ್ನೆಗಳೆಡೆಗೆ ಈಗ ಗಮನ ಹರಿಸೋಣ.

**ಪಳಗಿಸುವಿಕೆಯ ಪಾತ್ರವೇನು?**

ನಮ್ಮ ಬದುಕಿನ ಪ್ರೇರಣೆಗಳು ಮತ್ತು ಆತಂಕಗಳು ನಮ್ಮೊಬ್ಬರದೇ ಅಲ್ಲ ಎನ್ನುವುದನ್ನು ತಿಳಿದುಕೊಳ್ಳುವುದು ಬಲು ಮುಖ್ಯ. ತಲೆಮಾರುಗಳಿಂದ ಅತ್ಯಂತ ಜಾಗರೂಕತೆಯಿಂದ ಮತ್ತು ವ್ಯವಸ್ಥಿತವಾಗಿ ಪಳಗಿಸಲ್ಪಟ್ಟು ನಮ್ಮ ಸಮಾಜದ ಎಲ್ಲರ ಪ್ರಜ್ಞೆಯಲ್ಲಿ ಇವು ಹರಡಿವೆ. ಇದನ್ನು ಕಾಣಲು ಸಾಧ್ಯವೆ? ಅದೆಂದರೆ 'ನಾವೇ ಜಗತ್ತು' (ಕೃಷ್ಣಮೂರ್ತಿಯವರ ಮಾತುಗಳೂ, ಮೈಖಲ್ ಜಾಕ್ಸನ್‌ನದಲ್ಲ!) ನಾವು ನಿರ್ದಿಷ್ಟ ರೀತಿಯಲ್ಲಿ ಸ್ಪಂದಿಸಲು ಪಳಗಿಸಲ್ಪಟ್ಟಿದ್ದೇವೆ; ಸೋಲಿನ ಭಯ, ಭವಿಷ್ಯದ ಭಯ, ಅಧಿಕಾರದೆಡೆಗಿನ ಭಯ ಇತ್ಯಾದಿ. ನಮ್ಮ ಭಾವನೆಗಳು ನಾವು ಹೇಗೆ ಯೋಚಿಸುತ್ತೇವೆ ಎನ್ನುವುದನ್ನು ನಮಗೆ ತಿಳಿಸಬಹುದೇ ಹೊರತು ಅವು ಜಗತ್ತಿನ ನಿಜ ಸ್ವಭಾವವನ್ನು ಹೇಳಬಹುದೆ? ಬಹುಶಃ ನಮ್ಮೊಳಗಣ ಈ ಪಳಗಿಸುವಿಕೆಯ ಅವಸ್ಥೆಯನ್ನು ಸೂಕ್ಷ್ಮವಾಗಿ ಅವಲೋಕಿಸುವುದೇ ಅದರ ಬಿಗಿ ಹಿಡಿತದಿಂದ ಬಿಡಿಸಿಕೊಳ್ಳುವುದು ಎನ್ನಬಹುದು.

**ಒಂದು ವಿಷಯದ ಮೂಲಕ್ಕೆ ಹೋಗಿಯೂ ಅದರಿಂದ ಮುಕ್ತರಾಗಿರುವುದು ಹೇಗೆ?**

ಮಾನವನ ಮೆದುಳಿನ ಕುರಿತು ನಾವು ಹೇಗೆ ಯೋಚಿಸುತ್ತೇವೆ ಎಂಬುದನ್ನು ಕೆಲವು ಪ್ರಶ್ನೆಗಳು ಅನಾವರಣಗೊಳಿಸುತ್ತವೆ. ಕಲಿಕೆಯೆಡೆಗಿನ ಜಡತ್ವದಿಂದ ಮೆದುಳು ಎಚ್ಚರಗೊಳ್ಳಬೇಕು,. ಗಮನಕ್ಕಾಗಿ ಅಥವಾ ಇನ್ನು ಯಾವುದಕ್ಕೋ ನಾವು ತಂತ್ರಗಳನ್ನು ಅಭಿವೃದ್ಧಿಪಡಿಸಬೇಕಾದದ್ದು ಅಗತ್ಯ ಇಲ್ಲದಿದ್ದರೆ ನಾವು ನಿರ್ಲಕ್ಷದ ಸುಳಿಯೊಳಗೆ ಕಳೆದುಹೋಗುತ್ತೇವೆ, ಎಂದೆಲ್ಲ ನಾವು ಸಾಮಾನ್ಯವಾಗಿ ಸೂಚಿಸುತ್ತೇವೆ. ಆದರೆ, ಮನುಷ್ಯನ ಮೆದುಳು ಸದಾಕಾಲ ಕಲಿಯುವುದಕ್ಕೆ ತಯಾರಾಗಿದ್ದರೆ? ಒಂದು ವೇಳೆ ಕಲಿಕೆಗೆ ತೊಡಕುಗಳು ನಿರಂತರವಾಗಿ ನಮ್ಮ ಆಲೋಚನೆಗಳು ಸೃಷ್ಟಿಸುತ್ತಲೇ ಇರುವ ಬಹಳ ವೈಯಕ್ತಿಕ ಅನುಭವಗಳ ಮತ್ತು ಈ ವ್ಯವಸ್ಥೆಯ ಅಪಾಯಗಳ ಗಟ್ಟಿಯಾದ ಭಾವನೆಗಳೇ ಆಗಿದ್ದರೆ? ಅಥವಾ ಹೆಚ್ಚುತ್ತಿರುವ ನಿರ್ಲಕ್ಷವೇ ಗಮನವೀಯುವುದು ಅಂತಾದರೆ? ನಾವು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ಪ್ರಮೇಯವನ್ನು ಹೇಗೆ ಗಂಭೀರವಾಗಿ ವಿವೇಚನೆಗೆ ಒಡ್ಡಬಹುದು ಮತ್ತು ಆಡಬಹುದು?

**ನಮ್ಮ ಅನುವಭಗಳ ಸ್ವರೂಪ ಏನು ಮತ್ತು ಅನುಭವಿಸುವವ ಯಾರು?**

ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಎತ್ತಿಕೊಳ್ಳಬೇಕಾದ ಪ್ರಶ್ನೆ ಇದು ಎಂದು ನಿಜವಾಗಿಯೂ ಅನ್ನಿಸದೇ ಇರಬಹುದು. ಬಹುಶಃ ವಿದ್ಯಾರ್ಥಿಗಳನ್ನು ಹೊರತು ಪಡಿಸಿ ಸಂತರು, ಸಾಧ್ವಿಗಳು, ಬೈರಾಗಿಗಳು ಮತ್ತು ಹಿರಿಯರು ಕೇಳಬಹುದೋ ಏನೋ. ಆದರೂ ಶಿಕ್ಷಣ ಎನ್ನುವುದು ಇಂತಹ ಪ್ರಶ್ನೆಗಳ ಜತೆಗೆ ವ್ಯವಹರಿಸುವ ಸಾಧ್ಯತೆಯನ್ನು ನೀಡುತ್ತದೆ. ಇವೆಲ್ಲ ಮಹತ್ವದ ಪ್ರಶ್ನೆಗಳೇ ಆಗಿವೆ. ಯಾಕೆಂದರೆ ನಮ್ಮ ವ್ಯಕ್ತಿತ್ವ ಎನ್ನುವುದು ಕನ್ನಡಿ ಇದ್ದ ಹಾಗೆ. ಅದರ ಮೂಲಕ ನಾವು ಜಗತ್ತಿನ ಅನುಭವಗಳನ್ನು ಸಂಸ್ಕರಿಸುತ್ತಾ ಇರುತ್ತೇವೆ. ಈ ಅನುಭವಗಳ ಕುರಿತು ನಾವು ಅತ್ಯಂತ ಕಡಿಮೆ ತಿಳಿದುಕೊಂಡಿರುತ್ತೇವೆ ಎಂದು ಅನಿಸುತ್ತದೆ ಏಕೆಂದರೆ ನಾವು ಆ ಕನ್ನಡಿಯ ಬಗೆಗೆ ಸಾಕಷ್ಟು ಅರಿತೇ ಇರುವುದಿಲ್ಲ. ಒಳ್ಳೆಯ ಕಲಿಕೆಯ ಪ್ರಕ್ರಿಯೆ (ಶಿಕ್ಷಕರ ಮೂಲಕ ಅಂದರೆ ಒಳ್ಳೆಯ ವೇಗವರ್ಧಕ

ಎನ್ನಬಹುದು ) ಎನ್ನುವುದು ಏನನ್ನು ಕಲಿಯುತ್ತಾ ಇದ್ದೇವೆ ಮತ್ತು ಇನ್ನೂ ಚೆನ್ನಾಗಿ ಹೇಗೆ ಕಲಿಯಬಹುದು ಎಂಬ ನಮ್ಮ ಕುತೂಹಲವನ್ನು ನಿಜವಾಗಿಯೂ ಹೆಚ್ಚಿಸುತ್ತದೆ. ಇದೆಲ್ಲದಕ್ಕಿಂತ ಮುಖ್ಯವಾಗಿ ಯಾರು ಕಲಿಯುತ್ತಾ ಇದ್ದಾರೋ ಅವರನ್ನು ಗಮನಿಸುವುದೂ ಅತ್ಯಂತ ಮುಖ್ಯ ಎನ್ನುವುದನ್ನೂ ತಿಳಿಸುತ್ತದೆ. ಅಂದರೆ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧದಲ್ಲಿನ ವರ್ತನೆ ಅಥವಾ ಪಾತ್ರವನ್ನು ನಿರ್ಧರಿಸುವ ವ್ಯಕ್ತಿಯ ಆತ್ಮಚರಿತ್ರಾತ್ಮಕ ವ್ಯಕ್ತಿತ್ವದ ರೂಪುರೇಶೆಗಳನ್ನು ಗಮನಿಸುವುದು ಅಗತ್ಯ. ಶಿಕ್ಷಕನಿರಲಿ ವಿದ್ಯಾರ್ಥಿಯೋ ಅಥವಾ ಪಾಲಕರೋ ಆಗಲಿ ಯಾರೇ ಆಗಲಿ ಈ ವ್ಯಕ್ತಿತ್ವ ಪದೇ ಪದೇ ಸಾಧಕತನವನ್ನು ತೋರುತ್ತಲೇ ಇರುತ್ತದೆ.

ಈ ವೈಯಕ್ತಿಕ ವ್ಯಕ್ತಿತ್ವದ ಮನಸ್ಸಿನ ಸ್ವಭಾವ ಏನು? ನಮ್ಮ ಮತ್ತು ಜಗತ್ತಿನ ಕುರಿತು ನಾವು ಸತ್ಯ ಎಂದು ಸಂಗ್ರಹಿಸುವ ಸಮಾಚಾರಗಳ ಸ್ವಭಾವ ಏನು? ಇದೆಲ್ಲದರ ಬಗ್ಗೆ ನಾವು ಮಕ್ಕಳ ಜತೆಗೆ ಸುಮ್ಮನೇ ಮಾತನಾಡಿದರೂ ಸಾಕು. ಶಾಲೆಯಿಂದ ಆರಂಭವಾಗಿ ಬದುಕಿನುದ್ದದ ಕಲಿಕೆಯನ್ನು ಪ್ರಭಾವಿಸುವ ಚಿಂತನೆಗೆ ತೆರೆದುಕೊಳ್ಳಬಹುದು.

**ಉತ್ತಮ ಶಿಕ್ಷಣ**

ತರಗತಿಗಳಲ್ಲಿ ಹಾಗೂ ಬದುಕಿನ ಹಾದಿಯಲ್ಲಿ ಹಲವು ಉತ್ತಮ ಶಿಕ್ಷಕರನ್ನು ಸಂಧಿಸುತ್ತೇವೆ. ಉತ್ತಮ ಶಿಕ್ಷಕರಿಂದ ಉತ್ತಮ ತಿಳಿವು ಕಿಡಿಗಳನ್ನು ಹಚ್ಚಿ, ಪ್ರಶ್ನಿಸುವ ಮನಸ್ಥಿತಿಗೆ ಹಚ್ಚಿ ಒಳ್ಳೆಯ ಕಲಿಕೆಯನ್ನು ಸಾಧ್ಯವಾಗಿಸುತ್ತದೆ. ಶಿಕ್ಷಣ ಎನ್ನುವುದು ನಿರ್ದಿಷ್ಟ ವಿಷಯದ ಕುರಿತ ಜ್ಞಾನಕ್ಕೆ ಮಾತ್ರ ಸೀಮಿತವಲ್ಲ. ನಿರಂತರವಾದ ಗಮನಿಸುವಿಕೆ ಮತ್ತು ನಮ್ಮ ಒಳಗಿನ ಮತ್ತು ಹೊರಗಿನ ಜಗತ್ತನ್ನು ಆಲಿಸುವ ಮನಸ್ಥಿತಿಯನ್ನು ಶಿಕ್ಷಣವು ಜಾಗೃತವಾಗಿಡುತ್ತದೆ.

ಗ್ರಂಥಋಣ


* ದಿ ಇಕಾನಮಿಸ್ಟ್ ಆನ್‌ಲೈನ್ (ಜೂನ್ 11, 2016ನಲ್ಲಿ ಪ್ರಕಟಿತ)ನ ಶಿಕ್ಷಣ ಸುಧಾರಣೆ ಎಂಬ ವಿಭಾಗದಲ್ಲಿ ಪ್ರಕಟವಾದ 'ಟೀಚಿಂಗ್ ದ ಟೀಚರ್ಸ್' ಎಂಬ ಲೇಖನದಿಂದ.

ಕಳೆದ ವರ್ಷ ಪರಿಷ್ಕರಿಸಿದ ಅಧ್ಯಯನವೊಂದರಲ್ಲಿ, ಮೆಲ್ಬರ್ನ್ ವಿಶ್ವವಿದ್ಯಾಲಯದ ಜಾನ್ ಹ್ಯಾಟಿ ಅವರು 250ಮಿಲಿಯ ವಿದ್ಯಾರ್ಥಿಗಳ ಕಲಿಕೆಯ ಮೇಲೆ ನಡೆಸಿದ ನೂರಾರು ಹಸ್ತಕ್ಷೇಪಗಳ ಮೇಲಿನ ಪರಿಣಾಮಗಳಿಗಾಗಿ 65,000 ಸಂಶೋಧನ ಲೇಖನಗಳ ಫಲಿತಗಳನ್ನು ಸಂಸ್ಕರಿಸಿದ್ದಾರೆ. ಪಾಲಕರು ಶಾಲೆಗೆ ಸಂಬಂಧಿಸಿದ ಹಾಗೆ ಯಾವ ಅಂಶಗಳ ಮೇಲೆ ಹೆಚ್ಚು ಕಾಳಜಿ ವಹಿಸುತ್ತಾರೆ ಎಂದರೆ ತರಗತಿ ಗಾತ್ರ, ಸಮವಸ್ತ್ರ. ಆದರೆ ಸಾಮರ್ಥ್ಯದ ಪ್ರವಾಹದ ಬಗ್ಗೆ, ವಿದ್ಯಾರ್ಥಿಗಳು ಕಲಿಯುತ್ತಾರಾ ಇಲ್ಲವಾ ಎನ್ನುವುದರ ಬಗ್ಗೆ ಯಾವುದೇ ತಕರಾರು ಇಲ್ಲ. ಇಲ್ಲಿ ಮುಖ್ಯವಾಗುವುದು 'ಅಧ್ಯಾಪಕರ ತಜ್ಞತೆ'. ಶಾಲಾ ಹೊತ್ತಿನ ಕಲಿಕೆಯನ್ನು ಉತ್ತಮಗೊಳಿಸುವುದಕ್ಕೆ ಗುರುತಿಸಲಾದ ಎಲ್ಲ 20 ಅತ್ಯಂತ ಶಕ್ತಿಶಾಲೀ ದಾರಿಗಳೆಲ್ಲ ತರಗತಿಯಲ್ಲಿ ಅಧ್ಯಾಪಕ ಏನು ಮಾಡಿದರು ಎನ್ನುವುದನ್ನು ಆಧರಿಸಿಕೊಂಡಿದೆ.

** ಎ ಫ್ಲೇಮ್ ಆಫ್ ಲರ್ನಿಂಗ್: ಕೃಷ್ಣಮೂರ್ತಿ ವಿದ್ ಟೀಚರ್ಸ್. ಭಾರತದ ಕೃಷ್ಣಮೂರ್ತಿ ಫೌಂಡೇಷನ್‌ನಿಂದ 2005ರಲ್ಲಿ ಪ್ರಕಟಿತ.